## ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಶ್ರೀ ಎಂ.ಬಿ.ಗೋವಿಂದರಾಜು, ಅಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ರಾಯಚೂರು ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ಕೈಗೊಳ್ಳಲು ಪ್ರಕರಣವನ್ನು ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ-ಆದೇಶ.

*ಓದಲಾಗಿದೆ:*

| | |
|---|---|
| 1. | ಅಪರ ನಿಬಂಧಕರು ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ನ.ಪ.ಸಂಖ್ಯೆ:ಕಂಪ್ಲೇಟ್/ಉಪಲೋಕ್/ಜಿಎಲ್‌ಬಿ-464/2016/ಎಆರ್‌ಇ-5, ದಿನಾಂಕ:24.3.2017 |
| 2. | ಮಾನ್ಯ ಉಪ ಲೋಕಾಯುಕ್ತ-1, ರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ:ಕಂಪ್ಲೇಟ್/ಉಪಲೋಕ್/ಜಿಎಲ್‌ಬಿ-464/2016/ಎಆರ್‌ಇ-5, ದಿನಾಂಕ:18.03.2017. |

*ಪ್ರಸ್ತಾವನೆ:-*

ಅಪರ ನಿಬಂಧಕರು, ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ:24.3.2017 ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತರವರ ದಿನಾಂಕ:18.3.2017 ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತ-1ರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಜಲೀಲ್ ಅಹಮದ್ ತಂದೆ ಎಂ.ಎ.ಅಜೀಸ್, ಚುಕ್ಕನೂರು ಗ್ರಾಮ, ರಾಯಚೂರು ತಾಲ್ಲೂಕು ಇವರು ಲೋಕಾಯುಕ್ತ ಕಛೇರಿಗೆ ದೂರನ್ನು ಸಲ್ಲಿಸಿ, ಕುಕ್ಕನೂರು ಗ್ರಾಮದಿಂದ ಮರ್ಚೆಡ್ ಗ್ರಾಮದವರೆಗಿನ 3.00 ಕೀ.ಮಿ ರಸ್ತೆ ಕಾಮಗಾರಿಯನ್ನು ಕಳಪೆಯಾಗಿ ನಿರ್ಮಾಣ ಮಾಡಲಾಗಿದ್ದು, ಕಾಮಗಾರಿಯು ಅಂದಾಜು ಪ್ರಕಾರ ಇರುವುದಿಲ್ಲವೆಂದು ಆರೋಪಿಸಿರುತ್ತಾರೆ.

ಸದರಿ ದೂರಿನ ಕುರಿತು ಲೋಕಾಯುಕ್ತ ಸಂಸ್ಥೆಯು ತನಿಖೆ ಕೈಗೊಂಡಿದ್ದು, ಅಪಾದಿತರಾದ ಶ್ರೀ ಎಂ.ಬಿ.ಗೋವಿಂದರಾಜು ಇವರಿಂದ ವಿವರಣೆ ಪಡೆದಿರುತ್ತಾರೆ. ನಂತರ ಪೋಲೀಸ್ ಅಧೀಕ್ಷಕರು, ರಾಯಚೂರು ಇವರಿಂದ ತಪಾಸಣೆ ವರದಿ ವರದಿ ಪಡೆದಿದ್ದು ತಪಾಸಣೆ ವರದಿ ಪ್ರಕಾರ ಸದರಿ ಕಾಮಗಾರಿಯಲ್ಲಿ ಈ ಕೆಳಕಂಡ ಲೋಪಗಳು ಕಂಡುಬಂದಿರುತ್ತವೆ ಎಂದು ತಿಳಿಸಲಾಗಿದೆ:-

1. 0.00 ರಿಂದ 0.030 ನಡುವೆ ಎಡ ಬಾಗದಲ್ಲಿ ಬಿರುಕು ಕಂಡು ಬಂದಿರುವುದು.
2. ಕೀ.ಮೀ 0.90 ರಲ್ಲಿ ನಿರ್ವಹಿಸಿದ ಹಾರ್ಡ್ ಪ್ಯಾಸೇಜನ್ ಮೇಲ್ಬಾಗ ಮತ್ತು ತಳಭಾಗದಲ್ಲಿ ನಿರ್ವಹಿಸಿದ ಕಲ್ಲಿನ ಪಿಚ್ಚಿಂಗ್ ಹೆಚ್ಚುವರಿ ಮಳೆಯಿಂದ ಹಾನಿಯಾಗಿರುವುದು.
3. ಮೇಲಿನ ಕ್ರಮ ಸಂಖ್ಯೆ (1) ರಲ್ಲಿನ ಐಟಂ ಗಾತ್ರವು ಅಂದಾಜು ಪಟ್ಟಿಯನುಸಾರ 13050.00 ಆಗಿದ್ದು, ಅಳತೆ ಪುಸ್ತಕದನುಸಾರ 13120.00 ಅಳತೆಯನ್ನು ದಾಖಲಿಸಿ, 70 ರ ಗಾತ್ರಕ್ಕೆ ಹೆಚ್ಚುವರಿ ಹಣ ಪಾವತಿಸಿರುವುದು.
4. ಮೇಲಿನ ಕ್ರಮ ಸಂಖ್ಯೆ(2) ರಲ್ಲಿನ ಐಟಂ ಗಾತ್ರವು ಅಂದಾಜು ಪಟ್ಟಿಯನುಸಾರ 400 ಆರ್.ಎಂ.ಟಿ ಇದ್ದು, ಅಳತೆ ಪುಸ್ತಕದಲ್ಲಿ 5016 ಗಾತ್ರವನ್ನು ನಮೂದಿಸಲಾಗಿದೆ ಎಂದು ತಿಳಿಸಿರುತ್ತಾರೆ.

---2

ಆರೋಪಿತರಾದ ಶ್ರೀ ಎಂ.ಬಿ.ಗೋವಿಂದರಾಜು ಇವರು ಕ್ರಮವಾಗಿ ಸಲ್ಲಿಸಿರುವ ವಿವರಣೆಯಲ್ಲಿ ಕಾಮಗಾರಿಯನ್ನು ಅಂದಾಜು ಪಟ್ಟಿಯನುಸಾರ ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ತಿಳಿಸಿರುತ್ತಾರೆಂದು ಆದರೆ. ಸದರಿಯವರು ನೀಡಿರುವ ವಿವರಣೆಯು ಶಿಸ್ತು ನಡವಳಿಯನ್ನು ಕೈ ಬಿಡಲು ಸೂಕ್ತ ಹಾಗೂ ಸಮಾಧನಕರವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರಿದು, ಪ್ರಕರಣದ ವಾಸ್ತವಾಂಶ ಹಾಗೂ ಲಭ್ಯವಿರುವ ದಾಖಲೆಗಳಿಂದ ಶ್ರೀ ಎಂ.ಬಿ.ಗೋವಿಂದರಾಜು, ಕಾರ್ಯಪಾಲಕ ಇಂಜಿನಿಯರ್ ಇವರು ಸರ್ಕಾರಿ ನೌಕರರಾಗಿದ್ದು, ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಪ್ರಾಮಾಣಿಕತೆ ತೋರದೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆಯೆಂದು ಆದ್ದರಿಂದ ಸದರಿಯವರ ವಿರುದ್ಧ ವಿವರವಾದ ಇಲಾಖೆ ವಿಚಾರಣೆಯನ್ನ ನಡೆಸಲು ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತ- 1 ರವರು ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪ ಲೋಕಾಯುಕ್ತರವರ ವರದಿ ಹಾಗೂ ಸದರಿ ವರದಿಗೆ ಲಗತ್ತಿಸಿರುವ ತನಿಖಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ರಾಯಚೂರು ತಾಲ್ಲೂಕು, ಕುಕ್ಕನೂರು ಗ್ರಾಮದಿಂದ ಮರ್ಚೆಡ ಗ್ರಾಮದವರಗೆ 3 ಕಿಲೋ ಮೀಟರ್ ರಸ್ತೆ ಕಾಮಗಾರಿಯನ್ನು ಗುಣ ಮಟ್ಟದಿಂದ ನಿರ್ಮಾಣ ಮಾಡದೇ ಇರುವುದು ಕಂಡು ಬಂದಿರುತ್ತದೆ. ಈ ರೀತಿಯಾಗಿ ಸದರಿ ಕಾಮಗಾರಿಯ ಮೇಲ್ವಿಚಾರಣೆಯನ್ನು ಹೊಂದಿದ್ದ ಶ್ರೀ ಎಂ.ಬಿ.ಗೋವಿಂದರಾಜು, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಬಾಗ, ರಾಯಚೂರು ಇವರು ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತಗವಲ್ಲದ ರೀತಿ ವರ್ತಿಸಿರುವುದು ಕಂಡು ಬರುವುದರಿಂದ ಸದರಿಯವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖೆ ವಿಚಾರಣೆಯನ್ನು ನಡೆಸುವುದು ಅಗತ್ಯವೆಂದು ಸರ್ಕಾರವು ತಿರ್ಮಾನಿಸಿರುತ್ತದೆ. ಆದ್ದರಿಂದ ಈ ಆದೇಶ.

## ಆದೇಶ ಸಂಖ್ಯೆ:ಗ್ರಾಅಪ 150 ಜಿಪಅ 2107, ಬೆಂಗಳೂರು, ದಿನಾಂಕ:01.9.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಗಾಗಿ ಸರ್ಕಾರವು, ಶ್ರೀ ಎಂ.ಬಿ.ಗೋವಿಂದರಾಜು, ಅಂದಿನ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ರಾಯಚೂರು ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ 1957ರ ನಿಯಮ 11 ರಂತೆ ನಡೆಸುವ ಸಲುವಾಗಿ ಸದರಿ ನಿಯಮ -14(ಎ) ರಂತೆ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1 ರವರಗೆ ವಹಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

01/09/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ.
4. ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ, ಬೆಂಗಳೂರು
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು.
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
10. ಸಂಬಂಧಿಸಿದ ಅಧಿಕಾರಿಗೆ (ಲೋಕೋಪಯೋಗಿ ಇಲಾಖೆಯ ಮುಖಾಂತರ),
11. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು,
12. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್) /ಅಪರ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
13. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.